

### ವಿರಾಗಿಯ ಯಶಸ್ಸಿನ ಮಾದರಿ

2023ರ ಆರಂಭದಲ್ಲಿ ತೆರೆಕಂಡ ಬಿ.ಎಸ್. ಲಿಂಗದೇವರು ನಿರ್ದೇಶನದ ‘ವಿರಾಟಪುರ ವಿರಾಗಿ’, ಹಾನಗಲ್‌ನ ವಿರಕ್ತ ಮಠದ ಕುಮಾರಸ್ವಾಮಿಗಳ ಜೀವನವೃತ್ತಾಂತದ ನಿರೂಪಣೆ. ಭಾರತದ ಅನನ್ಯತೆಯಾದ ಬಹುತ್ವದ ದರ್ಶನವನ್ನೂ, ಬಸವ, ಗಾಂಧಿ ಮಾರ್ಗಗಳಲ್ಲಿನ ನಡಿಗೆಯನ್ನೂ ಪ್ರತಿಪಾದಿಸುವ ಈ ಸಿನಿಮಾ ಯಶಸ್ಸಿನ ಕಾರಣದಿಂದಲೂ ಒಂದು ವಿಶಿಷ್ಟ ಮಾದರಿಯಂತಿದೆ; ಜನರನ್ನು ಮುಟ್ಟಲು ಹೊಸ ದಾರಿಗಳ ಹುಡುಕಾಟದ ಅಗತ್ಯವನ್ನು ಸೂಚಿಸುವಂತಿದೆ.

ಬಿಡುಗಡೆಗೆ ಮೊದಲೇ ರಾಜ್ಯದ ವಿವಿಧ ಭಾಗಗಳಲ್ಲಿ ಸುಮಾರು 160 ಪ್ರೀಮಿಯರ್ ಶೋಗಳನ್ನು ನಡೆಸಿದ ಹೆಗ್ಗಳಿಕೆ ಈ ಸಿನಿಮಾದ್ದು. 75 ಸಾವಿರ ಟಿಕೆಟ್‌ಗಳು ಮಾರಾಟವಾಗಿ, ಎಲ್ಲ ಶೋಗಳೂ ತುಂಬಿದ ಗೃಹಗಳ ಪ್ರದರ್ಶನ ಕಂಡದ್ದು ವಿಶೇಷ. ಸಿನಿಮಾದ ಪ್ರಚಾರದ ರೂಪದಲ್ಲಿ 13 ದಿನಗಳ ಕಾಲ ನಡೆದ ‘ವಿರಾಗಿ ಶ್ರೀ ಕುಮಾರೇಶ್ವರ ರಥಯಾತ್ರೆ’ಯಲ್ಲಿ 6 ರಥಗಳು, 7 ಸಾವಿರ ಕಿ.ಮೀ. ದೂರವನ್ನು ಕ್ರಮಿಸಿದವು; 360 ಸಭೆಗಳು ನಡೆದು, ಸುಮಾರು 1 ಕೋಟಿ ಜನ ರಥಯಾತ್ರೆಯ ಭಾಗವಾದರು. ಇದೆಲ್ಲದರ ಫಲವಾಗಿ, ‘ವಿರಾಟಪುರ ವಿರಾಗಿ’ ಜನರಿಗೆ ಆಪ್ತವೆನ್ನಿಸಿತು, ಯಶಸ್ವೀ ಸಿನಿಮಾ ಅನ್ನಿಸಿಕೊಂಡಿತು.

ಮಾಡಲಿಲ್ಲ. ತನ್ನ ಬದುಕಿನ ಹಕ್ಕುಗಳನ್ನು ಬಯಸಿದ್ದಕ್ಕಾಗಿ ಯುವಕನೊಬ್ಬ ವ್ಯವಸ್ಥೆಯ ಕ್ರೌರ್ಯಕ್ಕೊಳಗಾಗುವ, ಮಂಸೋರೆ ನಿರ್ದೇಶನದ ‘19.20.21’ ವರ್ಷದ ಮತ್ತೊಂದು ಗಮನಾರ್ಹ ಪರ್ಯಾಯ ಫಸಲು. ರಾಮೇನಹಳ್ಳಿ ಜಗನ್ನಾಥ ನಿರ್ದೇಶನದ ‘ಹೊಂದಿಸಿ ಬರೆಯಿರಿ’ ಹಾಗೂ ಎನ್. ಆರ್. ನಂಜುಂಡೇಗೌಡ ನಿರ್ದೇಶನದ ‘ಕಾಸಿನ ಸರ’ ಸಿನಿಮಾಗಳು ಸದಭಿರುಚಿಯ ಕಥನದ ಕಾರಣದಿಂದಾಗಿ ಗಮನಸೆಳೆದ ಪ್ರಯತ್ನಗಳು.

ತಾರಾ ವರ್ಚಸ್ಸಿನ ನಿರ್ದೇಶಕರಾದ ಯೋಗರಾಜ್ ಭಟ್ ಹಾಗೂ ಸೂರಿ ಅವರಿಗೂ 2023 ಯಶಸ್ಸಿನ ಪಥವಾಗಲಿಲ್ಲ. ಭಟ್ಟರ ನಿರ್ದೇಶನದ ‘ಗರಡಿ’ ಹಾಗೂ ಸೂರಿ ಸೃಷ್ಟಿಸಿದ ‘ಬ್ಯಾಡ್ ಮ್ಯಾನರ್ಸ್’ ನಿರೀಕ್ಷಿತ ಗೆಲುವು ಸಾಧಿಸಲಿಲ್ಲ. ವ್ಯಾಕರಣದ ಮೂಲಕ ‘ಬ್ಯಾಡ್ ಮ್ಯಾನರ್ಸ್’ ಗಮನಸೆಳೆದರೂ ಯಶಸ್ಸಿನ ಸಿಹಿ ಚಿತ್ರಕ್ಕೆ ದಕ್ಕಲಿಲ್ಲ; ಅಂಬರೀಷ್ ಪುತ್ರ ಅಭಿಷೇಕ್ ನಟನೆಯ ಆಕರ್ಷಣೆ ಕೂಡ ಸಿನಿಮಾದ ಗೆಲುವಿಗೆ ನೆರವಾಗಲಿಲ್ಲ.

## ಭರವಸೆಯ ಹೊಸ ಬಲೂನುಗಳು!

ಹಳ್ಳಿ ಹೈದನಾಗಿ ದರ್ಶನ್ ನಟಿಸಿರುವ ‘ಕಾಟೇರ’ ಸಿನಿಮಾ 2023ರ ಕ್ರಿಸ್‌ಮಸ್ ಆಸುಪಾಸಿನಲ್ಲಿ ಅಥವಾ ಹೊಸ ವರ್ಷದ ಆರಂಭದಲ್ಲಿ ತೆರೆಕಾಣಲು ಸಿದ್ಧತೆ ನಡೆಸಿದೆ. ತರುಣ್ ಸುಧೀರ್ ನಿರ್ದೇಶನದ ಈ ಸಿನಿಮಾ ದರ್ಶನ್ ಅಭಿಮಾನಿಗಳಲ್ಲಿ ಭಾರೀ ನಿರೀಕ್ಷೆ ಹುಟ್ಟಿಸಿದೆ. ‘ಕಾಟೇರ’ದ ಮೂಲಕ ಮಾಲಾಶ್ರೀ ಅವರ ಪುತ್ರಿ ಆರಾಧನಾ ರಾಮ್ ನಾಯಕಿಯಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಳ್ಳುತ್ತಿದ್ದಾಳೆ. ಯಶ್ ನಟನೆಯ 19ನೇ ಸಿನಿಮಾದ ಆರಂಭಕ್ಕೆ ಕ್ಷಣಗಣನೆಯೂ ಡಿಸೆಂಬರ್ ಕೊನೆಯಲ್ಲಿ ಆರಂಭವಾಗಿದೆ. ‘ಟಾಕ್ಸಿಕ್’ ಎಂದು ಹೆಸರಿಸಲಾಗಿರುವ ಈ ಸಿನಿಮಾ ತೆರೆಕಾಣುವುದು 2025ರಲ್ಲಿ. ಅಲ್ಲಿಗೆ, 2024ರಲ್ಲಿ ಕೂಡ ಯಶ್‌ರ ಯಾವ ಸಿನಿಮಾವೂ ತೆರೆಕಾಣುವುದಿಲ್ಲ. ರಿಷಬ್‌ರ ‘ಕಾಂತಾರ’ ಚಿತ್ರದ ಸೀಕ್ವೆಲ್ ಮುಹೂರ್ತ ನಡೆದಿದೆ. ಈ ಎಲ್ಲ ಸಂಗತಿಗಳು 2024ರ ಬಗ್ಗೆ ಕನ್ನಡ ಚಿತ್ರರಂಗಕ್ಕೆ ಭರವಸೆಯ ಸೆಳಕುಗಳನ್ನು ಉಳಿಸುವಂತಿವೆ. ಆದರೆ, ಅಲ್ಲೊಂದು ಇಲ್ಲೊಂದು ಮಿಂಚು ಕಾಣಿಸಿಕೊಂಡರೆ ಚಿತ್ರೋದ್ಯಮದಲ್ಲೇನೂ ಹೊಸಬೆಳಕು ಕಾಣಿಸಿಕೊಳ್ಳುವುದಿಲ್ಲವಲ್ಲ! ಹೊಸಬೆಳಕಿಗೆ ಅಗತ್ಯವಾದುದು, ಹೊಸತನ್ನು ಕಟ್ಟಬಲ್ಲ ಸೃಜನಶೀಲ ಶಕ್ತಿ, ಹೊಸ ಕನಸನ್ನು ಕಾಣುವ ಹಂಬಲ ಹಾಗೂ ಕನ್ನಡದ ಹಿತ್ತಲಲ್ಲಿ ನಿಂತು ಜಗತ್ತಿನ ಜಗಲಿಗೆ ಮುಖಾಮುಖಿಯಾಗುವ ಮಹತ್ವಾಕಾಂಕ್ಷೆ.

ಮಳೆ ಕೊರತೆಯಿಂದಾಗಿ ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಕರ್ನಾಟಕ ಹಾಗೂ ತಮಿಳುನಾಡುಗಳ ನಡುವೆ ಇತ್ತೀಚೆಗೆ ಕಾನೂನು ಸಂಘರ್ಷ ಉಂಟಾಗಿತ್ತಷ್ಟೇ. ಆಗ, ಕಾವೇರಿ ನೀರಿಗೆ ಸಂಬಂಧಿಸಿದಂತೆ ಕರ್ನಾಟಕದ ಹಿತಾಸಕ್ತಿಯನ್ನು ಕಾಪಾಡುವಂತೆ ಸರ್ಕಾರವನ್ನು ಒತ್ತಾಯಿಸಿ ರೂಪುಗೊಂಡ ಚಳವಳಿಯಲ್ಲಿ ಕನ್ನಡ ಚಿತ್ರರಂಗದ ಭಾಗವಹಿಸುವಿಕೆ ಎಂದಿನಂತೆ ಅಷ್ಟಕ್ಕಷ್ಟೇ ಇತ್ತು. ಕನ್ನಡಿಗರ ಅಭಿಮಾನದ ಫಲಾನುಭವಿಗಳಾದ ಕಲಾವಿದರು, ನಾಡಿನ ಹಿತಾಸಕ್ತಿಗೆ ಧಕ್ಕೆಯುಂಟಾದಾಗಲೂ ಮೌನವಾಗಿರುವುದನ್ನು ಕೆಲವರು ಖಂಡಿಸಿದರು. ಆಗ ನಟ ದರ್ಶನ್ ನೀಡಿದ ಪ್ರತಿಕ್ರಿಯೆ ಕುತೂಹಲಕರವಾಗಿತ್ತು:

‘‘ಕಾವೇರಿ ಹೋರಾಟಕ್ಕೆ ನಾವು ಮಾತ್ರ ನಿಮ್ಮ ಕಣ್ಣಿಗೆ ಕಾಣೋದಾ? ಮೊನ್ನೆ ಬಂದ ತಮಿಳು ಚಿತ್ರದಲ್ಲಿ ಕರ್ನಾಟಕದಲ್ಲೇ ಕೋಟಿ ಕೋಟಿ ಮಾಡಿದವನು ನಿಮಗೆ ಕಾಣ್ತಿಲ್ವ? ಒಬ್ಬ ವಿತರಕ ತಮಿಳು ಚಿತ್ರದಿಂದ ಕರ್ನಾಟಕದಲ್ಲೇ 36 ಕೋಟಿ ರೂಪಾಯಿ ಮಾಡಿದ. 6 ಕೋಟಿ ಹಾಕಿ 36 ಕೋಟಿ ಮಾಡಿದ. ಅವನಿಗೆ ಯಾಕೆ ನೀವು ಕೇಳಲ್ಲ? ನಾವು ಮಾತ್ರ ನಿಮಗೆ ಕಾಣೋದಾ?’’

ದರ್ಶನ್‌ರ ಮಾತನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ನಟನೊಬ್ಬ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದ್ದಾನೆಂದೇ? ಕನ್ನಡಿಗರಿಂದ ಲಾಭವಾದಾಗಷ್ಟೇ ಅವರ ಪರವಾಗಿ ನಿಲ್ಲುವ ಉತ್ಸಾಹ ನಟನಲ್ಲಿ ಮೂಡುತ್ತದೆ ಎಂದೇ? ಸಿನಿಮಾಗಳನ್ನು ಗೆಲ್ಲಿಸದೆ ಹೋದರೆ, ತಮ್ಮ ಪರವಾಗಿ ಮಾತನಾಡುವಂತೆ ನಟರನ್ನು ಒತ್ತಾಯಿಸುವ ನೈತಿಕತೆ ಜನರಿಗೆ ಇರುವುದಿಲ್ಲವೆಂದೇ? ಅರ್ಥ ಯಾವುದಾದರೂ ಇರಲಿ, ನಟನೊಬ್ಬ ವ್ಯಾಪಾರಿಯಂತೆ, ರಾಜಕಾರಣಿಯಂತೆ ಮಾತನಾಡಿರುವುದು ಕನ್ನಡ ಚಿತ್ರರಂಗದಲ್ಲಿ ಆಗಿರುವ ಬದಲಾವಣೆಗೆ ಉದಾಹರಣೆಯಂತಿದೆ. ‘ಕನ್ನಡ ಸಿನಿಮಾ’ ಎನ್ನುವುದೀಗ ಬಹುತೇಕರಿಗೆ ವ್ಯಾಪಾರಿ ಉತ್ಪನ್ನವಾಗಿಯಷ್ಟೇ ಉಳಿದಿದೆ. ವ್ಯಾಪಾರಿಯೊಬ್ಬ ಸೋತಾಗ, ವ್ಯಾಪಾರವೊಂದು ನೆಲಕಚ್ಚಿದಾಗ ಜನಸಾಮಾನ್ಯರು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎನ್ನುವ ಸ್ಥಿತಿಯನ್ನು ಕನ್ನಡ ಚಿತ್ರರಂಗವೇ ರೂಪಿಸಲು ಹೊರಟಂತಿದೆ.

2024ರ ಮಾರ್ಚ್ 3ಕ್ಕೆ ಕನ್ನಡದ ಮೊದಲ ವಾಕ್ಚಿತ್ರ ‘ಸತಿ ಸುಲೋಚನಾ’ ತೆರೆಕಂಡು 90 ವರ್ಷ. ಈ ಚಾರಿತ್ರಿಕ ಸಂದರ್ಭವಾದರೂ, ಕನ್ನಡ ಚಿತ್ರರಂಗ ನಿದ್ದೆಯಿಂದ ಎಚ್ಚೆತ್ತುಗೊಳ್ಳಲು ಪ್ರೇರಣೆಯಾದೀತೆ?

ಪ್ರತಿಕ್ರಿಯಿಸಿ: feedback@sudha.co.in